3) ಭೂ ಸವೆತ ಮತ್ತು ಮೇಲ್ಮೈ ನೀರಿನ ನಿಯಂತ್ರಣಕ್ಕಾಗಿ ಸಾಗುವಳಿ ಭೂ ಅಭಿವೃದ್ಧಿ ಮಾಡುವುದು.

4) ಹುಲ್ಲುಗಾವಲು ಮತ್ತು ಅರಣ್ಯಗಳನ್ನು ಬೆಳೆಸಲು ಸಾಗುವಳಿಯಲ್ಲದ ಭೂಮಿಯ ನಿರ್ವಹಣೆ ಮಾಡುವುದು.

5) ಮಳೆಯ ಆಧಾರಿತ ಸಾಗುವಳಿ ಪ್ರದೇಶದಲ್ಲಿ ಬೆಳೆ ಉತ್ಪಾದನೆ ಹೆಚ್ಚಿಸುವುದು.

ಇ) 1989-90ನೇ ಸಾಲಿನಲ್ಲಿ 9.92 ಕೋಟಿ ರೂಪಾಯಿಗಳು ಖರ್ಚು ಮಾಡಲಾಗಿದೆ. 1990-91ನೇ ಸಾಲಿನಲ್ಲಿ ಒಟ್ಟು 1664.50 ಲಕ್ಷ ರೂ.ಗಳ ಕಾರ್ಯಕ್ರಮ ತೆಗೆದು ಕೊಳ್ಳುವ ಯೋಜನೆ ಇದೆ.

ಈ) ಇದೆ ಸ್ವಾಮಿ.

ಶ್ರೀ ಬಿ. ಶಿವರಾಮು.—ಮಾನ್ಯ ಅಧ್ಯಕ್ಷರೇ ನನ್ನ (ಈ)ಪ್ರಶ್ನೆಗೆ ಮಾನ್ಯ ಮಂತ್ರಿಗಳು "ಹೌದು" ಎಂದು ಉತ್ತರ ಕೊಟ್ಟಿದ್ದಾರೆ. ವಿಭಾಗೀಯ ಮಟ್ಟದಲ್ಲಿ ಖುಷ್ಕಿ ಅಭಿವೃದ್ಧಿ ಮಂಡಲಿಗಳಿಗೆ ಅಧ್ಯಕ್ಷರನ್ನು ನೇಮಿಸುವಾಗ ಆಧಿಕಾರಿಗಳನ್ನು ನೇಮಿಸುತ್ತೀರೋ ಅಥವಾ ಆಧಿಕಾರೇತರನ್ನು ನೇಮಿಸುತ್ತೀರೋ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರದಲ್ಲಿ ಹೇಳಿರುವಂತೆ ರಾಜ್ಯದಲ್ಲಿ ಖುಷ್ಕಿ ಅಭಿವೃದ್ಧಿ ಮಂಡಲಿಗಳು ನಾಲ್ಕು ಇವೆ. ಹಿಂದಿನ ಸರ್ಕಾರದವರು ಯಾವ ರೀತಿ ಮಾಡಿದ್ದರು ಎನ್ನುವುದು ತಪ್ಪಾಗೂ ನನಗೂ ಗೊತ್ತಿದೆ. ಮುಂದೆ ನಾವು ಯಾವ ರೀತಿ ಮಾಡಬೇಕು ಎನ್ನುವುದನ್ನು ಇನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಟಿ. ಶಿವರಾಮು.—ಹಿಂದೆ ಆಧಿಕಾರೇತರರು ಅಧ್ಯಕ್ಷರಾಗಿದ್ದರು, ಆಮೇಲೆ ರೆವಿನ್ಯೂ ಇಲಾಖೆಯ ಡಿವಿಜನಲ್ ಕಮಿಷನರ್ ಕಂಟಿನ್ಯೂ ಆಗುತ್ತಿದ್ದಾರೆ. ಆದ್ದರಿಂದ ನಾನು ಈಗ ಈ ಪ್ರಶ್ನೆ ಕೇಳಿದ್ದೇನೆ. ನಮ್ಮ ನಮ್ಮ ಕ್ಷೇತ್ರಗಳಲ್ಲಿ ಆಗಬೇಕಾದ ಕೆಲಸಗಳು ಏನು ಇರುತ್ತವೆ, ಆ ಎಲ್ಲಾ ಕೆಲಸ ಗಳನ್ನು ಮಾಡಿಕೊಳ್ಳಲು ಆಧಿಕಾರೇತರರು ಅಧ್ಯಕ್ಷರಾಗಿದ್ದರೆ ನಮ್ಮ ಕ್ಷೇತ್ರದ ಕೆಲಸಗಳನ್ನು ಮಾಡಿ ಕೊಳ್ಳಲು ಅಧ್ಯತೆ ಸಿಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ನನಗೆ ಉತ್ತರ ಹೇಳಬೇಕು,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಶಾಸಕರನ್ನು ಆ ಭಾಗದಲ್ಲಿ ಅಧ್ಯಕ್ಷರನ್ನಾಗಿ ಮಾಡ ಬೇಕೆನ್ನುವ ಅಂತಿಮ ತೀರ್ಮಾನಕ್ಕೆ ಸರ್ಕಾರ ಬರುವುದಾದರೆ ನಿಮ್ಮ ಸಂತೋಷದಲ್ಲಿ ನಾನೂ ಸಹ ಭಾಗಿ ಆಗುತ್ತೇನೆ. ಆದರೆ ಆದು ಸರ್ಕಾರದ ಪರಿಶೀಲನೆಯಲ್ಲಿದೆ. ಆ ಭಾಗದ ಶಾಸಕರಲ್ಲಿ ಯಾರನ್ನು ಅಧ್ಯಕ್ಷರನ್ನಾಗಿ ಮಾಡಿದರೂ ಸಹ ತಾವೆಲ್ಲ ಸಹಕರಿಸುತ್ತೀರಿ ಎನ್ನುವ ವಿಚಾರ ನನಗೆ ಗೊತ್ತು. ಆದರೂ ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಶಿವರಾಮು.—ಯಾರನ್ನು ಮಾಡಿದರೂ ಸಹ ಉಳಿದ ಶಾಸಕರು ಸಹಕರಿಸುತ್ತೇವೆ. ಒಟ್ಟಿನಲ್ಲಿ ಶಾಸಕರನ್ನು ಮಾಡಿದರೆ ನಮಗೆ ಅನುಕೂಲವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಒಳ್ಳೆಯ ಸಲಹೆ. ಸರ್ಕಾರ ಇದನ್ನು ತೀವ್ರವಾಗಿ ಗಮನದಲ್ಲಿಟ್ಟು ಕೊಳ್ಳುತ್ತದೆ.

ಕೊಳ್ಳೇಗಾಲದಲ್ಲಿ ಕುಡಿಯಲಿನ ನೀರಿನ ಕೊರತೆ

೧೦೮೮. ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೇಗಾಲ).—ಮಾನ್ಯ ವಸತಿ ಮಂತ್ರಿ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಳ್ಳೆಗಾಲ ಪಟ್ಟಣದಲ್ಲಿ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಲಿ ಇರುವ ನೀರಿನ ಟ್ಯಾಂಕ್ ೨೦ ವರ್ಷಗಳ ಹಿಂದೆ ನಿರ್ಮಾಣಗೊಂಡಿದೆಯೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಇ) ಹಾಗಿದ್ದಲ್ಲಿ, ಈಗಿರುವ ಜನಸಂಖ್ಯೆಗೆ ಅನುಗುಣವಾಗಿ ನೀರನ್ನು ಒದಗಿಸಲು ೨ನೇ ಹಂತದ ನೀರು ಸರಬರಾಜು ಯೋಜನೆಯನ್ನು ಸಿದ್ಧಪಡಿಸಲಾಗುವುದೇ ?

ಈ) ಹಾಗಿದ್ದಲ್ಲಿ, ಯಾವಾಗ ಸಿದ್ಧಪಡಿಸಿ ಕಾರ್ಯಗತಗೊಳಿಸಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ಬಂದಿದೆ

(ಆ) ಗೊತ್ತಾಗಿದೆ.

(ಇ) ಸಿದ್ಧಪಡಿಸಲಾಗುವುದು

(ಈ) ಅಂದಾಜನ್ನು ಸುಮಾರು ಆರು ತಿಂಗಳ ಅವಧಿಯಲ್ಲಿ ಸಿದ್ಧಪಡಿಸಲಾಗುವುದು ಹಾಗೂ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಂತರ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎಂ. ಸಿದ್ದಮಾದಯ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೆಂದು ಮತ್ತು ೪ ತಿಂಗಳಿನಲ್ಲಿ ಕಾರ್ಯಗತ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಅಧಿಕಾರಿಗಳು ಡಿಲೇ ಮಾಡಿದರೆ ಏನು ಮಾಡುವುದು ? ಇದು ತುರ್ತಾಗಿ ಆಗಬೇಕಾಗಿದೆ. ನೀರು ಇಲ್ಲದೆ ಒಹಳ ತೊಂದರೆಯಾಗಿದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ —ಕೊಳ್ಳೆಗಾಲ ಟೌನ್ ಏನಿವೆ, ಅಲ್ಲಿ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿಗೆ ನೀರಿನ ವ್ಯವಸ್ಥೆ ಸಾಕಾಗುವುದಿಲ್ಲವೆಂದೂ ಸಹಾ ಗೊತ್ತಾಗಿದೆ. ಕರ್ನಾಟಕ ನೀರು ಸರಬರಾಜು ಮಂಡಳಿಯವರಿಗೆ ಇದರ ಬಗ್ಗೆ ಆದೇಶ ಕೊಡಲಾಗಿದೆ. ಆದಷ್ಟು ಬೇಗ ಅದರ ಎಸ್ಟಿಮೇಟನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡಿ ಅದನ್ನು ತರಿಸಿಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಸಿದ್ದವನಾದಯ್ಯ.—ಅಲ್ಲಿ ಹಾಕಿರುವ ಪೈಪುಗಳು ಹಳೆಯವು ಆಗಿರುವುದರಿಂದ, ಕೆಲವು ಕಡೆ ಒಡೆದು ಹೋಗಿ ನೀರು ಸರಿಯಾಗಿ ಸಪ್ಲೈ ಆಗುತ್ತಿಲ್ಲ. ಈಗ್ಗೆ ೩ ದಿನಗಳಿಂದ ನೀರೇ ಬರುತ್ತಿಲ್ಲ. ಆದ್ದರಿಂದ ಹಳೆಯ ಪೈಪ್‌ಗಳನ್ನು ಬದಲಾಯಿಸುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಹಳೇ ಪೈಪುಗಳನ್ನು ರೀಪ್ಲೇಸ್ ಮಾಡಬೇಕೆಂದು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಅದನ್ನು ಮಾಡಿಯೇ ಮಾಡುತ್ತೇವೆ.

ಅಧ್ಯಕ್ಷರು.—ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಮೇಲ್ಮನೆಗೆ ಹೋಗಬೇಕಾಗಿರುವುದರಿಂದ ಮೊದಲು ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಮೊದಲಂ ತೆಗೆದು ಕೊಳ್ಳುತ್ತೇನೆ.

ನಿಪ್ಪಾಣಿ ನಗರಸಭೆಗೆ ಅಭಿವೃದ್ಧಿ ಅನುದಾನ

೬೯೯. ಶ್ರೀ ಸುಭಾಶ್ ಜೋಶಿ (ನಿಪ್ಪಾಣಿ),—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ನಿಪ್ಪಾಣಿ ನಗರಸಭೆಗೆ ಅಭಿವೃದ್ಧಿ ಅನುದಾನವನ್ನು ನೀಡಲಾಗಿದೆಯೇ ?

(ಆ) ಇಲ್ಲವಾದಲ್ಲಿ ಇದನ್ನು ಯಾವಾಗ ನೀಡಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ಇಲ್ಲ.

(ಆ) ಸೂಕ್ತ ಸಮಯದಲ್ಲಿ ಪರಿಶೀಲಿಸಲಾಗುವುದು.

SRI SUBHASH JOSHI.—The answer given to me is, "This will be examined at the appropriate time." When will be the appropriate time ? because all development works are held up in Nippani and it is facing lot of problem. Why the government is giving step-motherly treatment to Nippani CMC ?